ಆ) ಮಂಜೂರಾದ ಹುದ್ದೆಗಳು ಖಾಲಿ ಇರುವ ಹುದ್ದೆಗಳು

ಪಿ.ಐ.	9	–
ಪಿ.ಎಸ್.ಐ.	24	–
ಡಬ್ಲ್ಯುಪಿಎಸ್ಐ	06	–
ಎ.ಎಸ್.ಐ.	51	06
ಡಬ್ಲ್ಯುಎಎಸ್ಐ	01	–
ಹೆಚ್.ಸಿ.ಎಸ್	158	09
ಎಬ್ಲ್ಯುಎಚ್ಸಿ	10	01
ಪಿ.ಸಿ.	495	41
ಡಬ್ಲ್ಯುಪಿಸಿ	19	09

ಇ) ಎ.ಎಸ್.ಐ. ಹೆಚ್.ಸಿ. ಮತ್ತು ಮ.ಹೆಚ್.ಸಿ. ಹುದ್ದೆಗಳನ್ನು ಭಡ್ತಿ ಮೂಲಕ ಹಾಗೂ ಪಿ.ಎಸ್.ಸಿ. ಪಿಸಿ ಮತ್ತು ಮ.ಪಿ.ಸಿ. ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಪ್ರಕ್ರಿಯೆ ಪ್ರಾರಂಭಗೊಂಡಿದೆ.

ಈ) ಈ ಅವಧಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ 2127

ಉ) ಈ ಅವಧಿಯಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ 696

ಬೈಲಹೊಂಗಲ ನಗರದಲ್ಲಿನ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು

4423 (5041) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹಿಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀಮತಿ. ರೇಣುಕಾ ಚಿದಂಬರಂ ಇವರು ಬೈಲಹೊಂಗಲ ನಗರಕ್ಕೆ ಬಂದು, ಇಲ್ಲಿನ ರಸ್ತೆಗಳ ಸ್ಥಿತಿ–ಗತಿಗಳನ್ನು ಅವಲೋಕಿಸಿ ಕೂಡಲೇ ಈ ರಸ್ತೆಗಳ ದುರಸ್ತಿಗಾಗಿ 55 ಲಕ್ಷ ರೂ.ಗಳನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ವರದಿಯನ್ನು ಕಳುಹಿಸಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹಿಂದಿನ ಜಿಲ್ಲಾಧಿಕಾರಿಗಳು ಕೋರಿರುವಂತೆ ಬೈಲಹೊಂಗಲ ನಗರದ ರಸ್ತೆ ದುರಸ್ತಿಗಾಗಿ 55 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ;

ಇ) ಬೈಲಹೊಂಗಲ ನಗರಕ್ಕೆ ಮಲಪ್ರಭಾ ಯೋಜನೆಯ ಮುಳುಗಡೆ ಪ್ರದೇಶದ ಜನರು ವಲಸೆ ಬಂದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಮಲಪ್ರಭಾ ಮುಳುಗಡೆ ಪ್ರದೇಶದ ವಲಸೆಯಾದ ಜನರಿಗೆ ಅನುಕೂಲತೆಗಾಗಿ ಬೈಲಹೊಂಗಲ ನಗರದಲ್ಲಿರುವ ರಸ್ತೆಗಳನ್ನು ಸುಧಾರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕುಮಾರ್ ಎಸ್. ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) ಬಂದಿದೆ.

ಆ) ರೂ. 10.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಬೈಲಹೊಂಗಲ ನಗರದಲ್ಲಿರುವ ಕಾರಗೃಹ ಹಾಗೂ ವಸತಿ ಗೃಹಗಳಿಗೆ ಕಾಂಪೌಂಡ್ ಕಟ್ಟುವುದು

4424 (5042) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಬೈಲಹೊಂಗಲ ನಗರದಲ್ಲಿರುವ ಕಾರಾಗೃಹಕ್ಕೆ ಹಾಗೂ ವಸತಿ ಗೃಹಕ್ಕೆ ಕಾಂಪೌಂಡ್ ಇಲ್ಲದೆ ಇರುವುದರಿಂದ ಸರ್ಕಾರದ ಜಾಗವು ಅತಿಕ್ರಮಣವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದ ಜಾಗವು ಅತಿಕ್ರಮಣವಾಗುವುದನ್ನು ತಪ್ಪಿಸಲು ಬೈಲಹೊಂಗಲದ ಕಾರಾಗೃಹಕ್ಕೆ ಹಾಗೂ ವಸತಿ ಗೃಹಕ್ಕೆ ಕಾಂಪೌಂಡ್ ಗೋಡೆ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಾಜ ಅಮರೇಶ್ವರ ನಾಯಕ್ (ಬಂದೀಖಾನೆ ಸಚಿವರು)

ಅ) – ಇಲ್ಲ –

ಆ) ಸರ್ಕಾರದ ಜಾಗವು ಅತಿಕ್ರಮಣವಾಗುವುದನ್ನು ತಪ್ಪಿಸಲು ಕಾರಾಗೃಹದ ಹಾಗೂ ವಸತಿ ಗೃಹಗಳ ಸುತ್ತಲೂ ಈಗಾಗಲೇ 110 ಅಡಿಗಳಷ್ಟು ಉದ್ದದ ಕಾಂಪೌಂಡ್ ಗೋಡೆಯನ್ನು ನಿರ್ಮಾಣ ಮಾಡಿದೆ. ಉಳಿದ ಕಾಮಗಾರಿಯನ್ನು ಆಧುನೀಕರಣ ಯೋಜನೆಯಲ್ಲಿ ಪೂರ್ಣಗೊಳಿಸಲಾಗುವುದು.

ಕೆ.ಎಸ್.ಆರ್.ಟಿ.ಸಿ.ಯು ರಾಜ್ಯದ ವಿವಿಧ ವಿಭಾಗಗಳಲ್ಲಿ ಮಿನಿಬಸ್ ಸಂಚಾರವನ್ನು ಪ್ರಾರಂಭಿಸುವ ಬಗ್ಗೆ

4425 (5043) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆ.ಎಸ್.ಆರ್.ಟಿ.ಸಿ. ಮಿನಿಬಸ್ ಸಂಚಾರವನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಿರುವ ಸಂಗತಿ ನಿಜವೇ;

ಆ) ಹಾಗಿದ್ದಲ್ಲಿ, ಎಷ್ಟು ಮಿನಿ ಬಸ್ ಸಂಚಾರವನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿದೆ;

ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಮಿನಿ ಬಸ್ ಸಂಚಾರವನ್ನು ಯಾವ–ಯಾವ ಸ್ಥಳಗಳಲ್ಲಿ ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿದೆ;